ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 12-6-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | "ದೇಶದ ಆಹಾರದ ಉತ್ಪಾದನೆ-2050" ಎಂಬ ವಿಷಯದ ಬಗ್ಗೆ ಉಪನ್ಯಾಸ: ಡಾ.ಎಸ್.ಅಯ್ಯಪನ್, ಡೈರೆಕ್ಟರ್ ಜನರಲ್, ಕೃಷಿ ಅನುಸಂಧನ ಪರಿಷತ್ ನವದೆಹಲಿ<br>ವಿ.ಸೂ.:<br>ಈ ಸಮಾರಂಭಕ್ಕೆ ವಾಹನ ವ್ಯವಸ್ಥೆ ಮಾಡಲಾಗಿದ್ದು ವಾಹನವು ಅಂದು ಬೆಂಗಳೂರು ಪ್ರೆಸ್ ಕ್ಲಬ್ ಆವರಣದಿಂದ ಸಂಜೆ 3-15 ಕ್ಕೆ ನಿಗಧಿತ ಸ್ಥಳಕ್ಕೆ ತೆರಳಲಿದೆ<br>ಸಂಪರ್ಕ: ಡಾ: ಎಲ್ ರಾಮಕೃಷ್ಣರಾವ್, ಹಿರಿಯ ವಾರ್ತಾ ತಜ್ಞರು<br>9986663132 | 13-06-2015<br>ಶನಿವಾರ<br>ಸಂಜೆ<br>04-00 ಗಂಟೆಗೆ | ಕೃಷಿ ವಿಶ್ವ ವಿದ್ಯಾನಿಲಯ, ಪಶು ವೈದ್ಯಕೀಯ ಆವರಣ ಹೆಬ್ಬಾಳ ಬೆಂಗಳೂರು |
| 2 | ಸ್ವಚ್ಛ ಮಂದಿರ ಅಭಿಯಾನ<br>ಉದ್ಘಾಟನೆ:<br>ಶ್ರೀ ಟಿ.ಬಿ. ಜಯಚಂದ್ರ, ಕಾನೂನು ಸಂಸದೀಯ, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು | 14-05-2015<br>ಭಾನುವಾರ<br>ಮಧ್ಯಾಹ್ನ<br>2-00 ಗಂಟೆಗೆ<br><br>14-05-2015<br>ಭಾನುವಾರ<br>ಮಧ್ಯಾಹ್ನ<br>2-15 ಗಂಟೆಗೆ | 1) ಶ್ರೀ ಕೋಟೆ ವೆಂಕಟರಮಣಸ್ವಾಮಿ ದೇವಾಲಯ, ಕೋಟೆ ರಸ್ತೆ, ಚಾಮರಾಜಪೇಟೆ, ಬೆಂಗಳೂರು<br><br>2)ಶ್ರೀ ರಾಮೇಶ್ವರ ದೇವಾಲಯ ಹಾಗೂ ಕಲ್ಯಾಣ ಮಂಟಪ ಚಾಮರಾಜಪೇಟೆ ಬೆಂಗಳೂರು |

| | | | |
|---|---|---|---|
| | | 14-05-2015<br>ಭಾನುವಾರ<br>ಮಧ್ಯಾಹ್ನ<br>2-45 ಗಂಟೆಗೆ | 3)ಶ್ರೀ ದಕ್ಷಿಣ ಮುಖ ನಂದೀತೀರ್ಥ ಕಲ್ಯಾಣಿ ದೇವಾಲಯ,<br>ನಂದಿತೀರ್ಥ,<br>ಮಲ್ಲೇಶ್ವರ, ಬೆಂಗಳೂರು |
| ೩ | 108 ತುರ್ತುಸೇವೆಗಳ ಸಂಸ್ಥೆಯಿಂದ ರಕ್ತದಾನ ಶಿಬಿರ:<br>ಉದ್ಘಾಟನೆ:<br>ಡಾ: ಮೂಲಾ ಅನುರಾಧ,<br>ನಿರ್ದೇಶಕರು<br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶಕರು<br><br>ವಿ.ಸೂ.<br>ಈ ಸಮಾರಂಭಕ್ಕೆ ವಾಹನ ವ್ಯವಸ್ಥೆ ಮಾಡಲಾಗಿದ್ದು ವಾಹನವು ಅಂದು ಬೆಳಿಗ್ಗೆ 8-30 ಗಂಟೆಗೆ ವಾರ್ತಾ ಸೌಧದಿಂದ ಹೊರಡಲಿದೆ | 16-6-2015<br>ಸೋಮವಾರ<br>ಬೆಳಿಗ್ಗೆ<br>9-30 ಗಂಟೆಗೆ | ಜಿವಿಕೆ ಇಎಂಆರ್‌ಐ ಕಚೇರಿ,<br>ಮಾಗಡಿ ರಸ್ತೆ,<br>ಬಸವೇಶ್ವರನಗರ,<br>ಬೆಂಗಳೂರು-76<br>(ಸರ್ಕಾರಿ ಯುನಾನಿ ಮೆಡಿಕಲ್ ಕಾಲೇಜು ಹತ್ತಿರ) |
| 4 | "ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿ" ನೀಡಿಕೆ ಸಮಾರಂಭ.<br>ಪ್ರಶಸ್ತಿ ಪ್ರದಾನ:<br>ಶ್ರೀ ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ | 15-06-2015<br>ಸೋಮವಾರ<br>ಸಂಜೆ<br>04-00 ಗಂಟೆಗೆ | ಮುಖ್ಯಮಂತ್ರಿಯವರ ಗೃಹ ಕಛೇರಿ<br>ಕೃಷ್ಣಾ<br>ಬೆಂಗಳೂರು. |
| 5 | ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ತಜ್ಞರ ಸಮಿತಿ ಪರಿಶೀಲನಾ ಭೇಟಿ:<br>ಅಧ್ಯಕ್ಷತೆ: ವಿ.ಎಸ್. ಉಗ್ರಪ್ಪ<br>(ದಿನಾಂಕ 31-3-2015 ರಂದು ಕಾಲೇಜಿನ ಪಿ.ಯು.ಸಿ. ವಿದ್ಯಾರ್ಥಿನಿಯರ ಮೇಲೆ ನಡೆದ ಗುಂಡಿನ ದಾಳಿಯ ಬಗ್ಗೆ ಪರಿಶೀಲನೆ) | 15-06-2015<br>ಸೋಮವಾರ<br>ಸಂಜೆ<br>04-00 ಗಂಟೆಗೆ | ಪ್ರಗತಿ ಶಾಲೆ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆ,<br>ಕಾಡುಗೋಡಿ<br>ಬೆಂಗಳೂರು. |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಜನರ ಸಹಕಾರ ಅತಿ ಮುಖ್ಯ

.　　　　　　　　　　　　　　　　　　　　　　　　　　-ಸಚಿವ ಪರಮೇಶ್ವರ ನಾಯ್ಕ್

ಬೆಂಗಳೂರು,ಜೂ.12 (ಕರ್ನಾಟಕ ವಾರ್ತೆ) :

ಪ್ರಸ್ತುತ ಮಂಗಳೂರು ಜಿಲ್ಲೆಯು 'ಬಾಲಕಾರ್ಮಿಕ ಮುಕ್ತ ಜಿಲ್ಲೆ'ಯಾಗಿದ್ದು, ಉಳಿದ ಜಿಲ್ಲೆಗಳಲ್ಲೂ ಸಹ ಬಾಲಕಾರ್ಮಿಕ ಪದ್ಧತಿಯಂತಹ ಅನಿಷ್ಟ ಪದ್ಧತಿಯನ್ನು ಸಂಪೂರ್ಣವಾಗಿ ತಡೆಗಟ್ಟುವ ಮೂಲಕ ಇಡೀ ಕರ್ನಾಟಕ ರಾಜ್ಯವನ್ನು ಬಾಲಕಾರ್ಮಿಕ ಮುಕ್ತ ರಾಜ್ಯವನ್ನಾಗಿಸಲು ಸರ್ಕಾರ ಕಂಕಣಬದ್ಧವಾಗಿದೆ ಎಂದು ಕಾರ್ಮಿಕ ಇಲಾಖೆ ರಾಜ್ಯ ಸಚಿವ ಪಿ.ಟಿ ಪರಮೇಶ್ವರ ನಾಯ್ಕ್ ಅವರು ಕರೆ ನೀಡಿದರು.

ಬಾಲಕಾರ್ಮಿಕರ ಕುರಿತಾಗಿ ಸಾರ್ವಜನಿಕರಿಂದ ಬರುವ ದೂರುಗಳನ್ನು ದಾಖಲಿಸಿಕೊಳ್ಳಲು ಕಾರ್ಮಿಕ ಕೇಂದ್ರ ಕಚೇರಿಯಲ್ಲಿ ನಿಯಂತ್ರಣ ಕೊಠಡಿ ತೆರೆದಿರುವುದಲ್ಲದೆ ಆನ್‌ಲೈನ್ ಮೂಲಕ ದೂರನ್ನು ದಾಖಲಿಸುವ ವ್ಯವಸ್ಥೆ ಕಲ್ಪಿಸಲಾಗಿದ್ದು, ಉಚಿತ ಮಕ್ಕಳ ಸಹಾಯವಾಣಿ '1098' ಸಹ ತೆರೆಯಲಾಗಿದೆ ಎಂದು ಕಾರ್ಮಿಕ ಸಚಿವರು ತಿಳಿಸಿದರು.

ಕಾರ್ಮಿಕ ಇಲಾಖೆ ವತಿಯಿಂದ ಇಂದು ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಏರ್ಪಡಿಸಿದ್ದ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನ್ನಾಡಿದ ಅವರು, ಸ್ವಾತಂತ್ರ್ಯಾ ನಂತರ ಸಂವಿಧಾನದಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ, ಶೋಷಣೆ ತಪ್ಪಿಸಲು ಮಕ್ಕಳ ಕಡ್ಡಾಯ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿದ್ದು, ಭಾರತ ಸಂವಿಧಾನದ 24ನೇ ವಿಧಿಯನ್ವಯ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕಳನ್ನು ಕಾರ್ಖಾನೆ, ಗಣಿ ಅಥವ ಯಾವುದೇ ರೀತಿಯ ಅಪಾಯಕಾರಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದನ್ನು ನಿರ್ಬಂಧಿಸಿದೆ ಎಂದು ಅವರು ತಿಳಿಸಿದರು.

ರಾಜ್ಯ ಸರ್ಕಾರವು 2001ರಲ್ಲಿ ಬಾಲಕಾರ್ಮಿಕ ಕ್ರಿಯಾ ಯೋಜನೆಯನ್ನು ದೇಶದಲ್ಲಿ ಪ್ರಥಮ ಬಾರಿಗೆ ರೂಪಿಸಿ ಜಾರಿಗೆ ತಂದಿದ್ದು, ಕ್ರಿಯಾ ಯೋಜನೆಯ ಆಶಯಗಳಿಗೆ ಅನುಗುಣವಾಗಿ ಸರ್ಕಾರವು ಕ್ರಮ ಕೈಗೊಳ್ಳುತ್ತಾ ಬಂದಿದೆ ಎಂದ ಅವರು, ಈ ಯೋಜನೆಗಳ ಅನುಷ್ಟಾನದ ಮೂಲಕ 1,20,709 ಬಾಲಕಾರ್ಮಿಕರನ್ನ ಮುಖ್ಯವಾಹಿನಿಗೆ ತರಲಾಗಿದೆ ಎಂದರು.

ಬಾಲಕಾರ್ಮಿಕರನ್ನು ನೇಮಿಸಿಕೊಂಡಿದ್ದ ಮಾಲೀಕರಿಂದ ಕನಿಷ್ಟ ವೇತನದ ವ್ಯತ್ಯಾಸದ ರೂಪದಲ್ಲಿ 1,03,21,512 ಗಳನ್ನು ವಸೂಲಿ ಮಾಡಿ ಬಾಲಕಾರ್ಮಿಕ ಕುಟುಂಬಗಳಿಗೆ ಹಂಚಲಾಗಿದೆ ಎಂದ ಅವರು, ಬಾಲಕಾರ್ಮಿಕ ಯೋಜನೆಯಡಿ 75 ಶಾಲೆಗಳನ್ನು 17 ಜಿಲ್ಲೆಗಳಲ್ಲಿ ನಡೆಸಲಾಗುತ್ತಿದ್ದು, ಇವುಗಳ ಪೈಕಿ 49 ಶಾಲೆಗಳನ್ನು ವಿಶೇಷ ವಸತಿ ಶಾಲೆಗಳನ್ನಾಗಿ ಪರಿವರ್ತಿಸಿದ್ದು, ಈ ಶಾಲೆಗಳಲ್ಲಿ 2682 ಬಾಲಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಲಾಗಿದೆ ಎಂದರು.

25 ವಸತಿ ಶಾಲೆಗಳನ್ನು 13 ಜಿಲ್ಲೆಗಳಲ್ಲಿ ನಡೆಸುತ್ತಿದ್ದು , 600 ಬಾಲಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಲಾಗಿದೆ ಎಂದರು.

ಸಾರಿಗೆ ಸಚಿವರು ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗಾರೆಡ್ಡಿ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನ್ನಾಡುತ್ತಾ, ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಎಲ್ಲ ದೇಶಗಳು ಸಹಸ್ರಾರು ವರ್ಷಗಳಿಂದ ಪ್ರಯತ್ನ ನಡೆಸುತ್ತಿದ್ದರೂ ಸಹ ಸಂಪೂರ್ಣ ನಿರ್ಮೂಲನೆ ಮಾಡಲು ಸಾಧ್ಯವಾಗಿಲ್ಲ ಎಂದರು.

ಬೆಳೆಯುವ ಮಕ್ಕಳನ್ನು ನಾನಾ ಕಾರಣಗಳಿಂದ ಬಾಲಕಾರ್ಮಿಕ ಪದ್ಧತಿಗೆ ದೂಡುವುದು ವಿಷಾಧಕರ ಎಂದ ಅವರು, ಈ ಅನಿಷ್ಟ ಪದ್ಧತಿ ನಿರ್ಮೂಲನೆ ಸಾರ್ವಜನಿಕರ ಸಹಕಾರದಿಂದ ಮಾತ್ರ ಸಾಧ್ಯ. ಪ್ರತಿಯೊಬ್ಬರು ನಾವುಗಳು ಇನ್ನು ಮುಂದೆ ಯಾವುದೇ ಸಂದರ್ಭದಲ್ಲೂ ಬಾಲಕಾರ್ಮಿಕರನ್ನು ನೇಮಿಸಿಕೊಳ್ಳುವುದಿಲ್ಲ ಎಂದು ಸಂಕಲ್ಪ ಮಾಡಿದಲ್ಲಿ ಅಂದೇ ಈ ಅನಿಷ್ಟ ಪದ್ಧತಿ ಕೊನೆಗೊಳ್ಳುವುದು ಎಂದರು.

ಇದೇ ಸಂದರ್ಭದಲ್ಲಿ ಬಾಲಕಾರ್ಮಿಕ ವ್ಯವಸ್ಥೆಗೆ ಸಿಲುಕಿ ವಿಶೇಷ ಶಾಲೆಗೆ ಸೇರಿದ್ದ ಮಕ್ಕಳನ್ನು ಮುಖ್ಯ ವಾಹಿನಿಗೆ ತರುವ ಸಂಕೇತವಾಗಿ ಶಾಲಾ ಬ್ಯಾಗುಗಳನ್ನು ವಿತರಿಸಲಾಯಿತು. ಮತ್ತು 'ಚಿಗುರು' ಸ್ಮರಣಸಂಚಿಕೆಯನ್ನು ಸಚಿವರುಗಳೂ ಬಿಡುಗಡೆ ಮಾಡಿದರು.

ಕಾರ್ಮಿಕ ಇಲಾಖೆ ಮುಖ್ಯ ಕಾರ್ಯದರ್ಶಿ ಪಿ.ಬಿ.ರಾಮಮೂರ್ತಿ, ಕಾರ್ಮಿಕ ಆಯುಕ್ತರಾದ ಡಿ.ಎಸ್.ವಿಶ್ವನಾಥ್ ಮತ್ತು ಕಾರ್ಮಿಕ ಮುಖಂಡರುಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಮತಾ(ಸ.ನಿ)

## ಕೃಷಿ ಅಭಿಯಾನ ಯೋಜನೆ ಮೂಲಕ ರೈತರಿಗೆ ಅರಿವು:

• ಶ್ರೀ ಕೃಷ್ಣಭೈರೇಗೌಡ

ಬೆಂಗಳೂರು, ಜೂನ್ 12 (ಕರ್ನಾಟಕ ವಾರ್ತೆ)

ಪ್ರಸಕ್ತ ಸಾಲಿನ ಮಳೆ ಪ್ರಮಾಣಕ್ಕೆ ಅನುಗುಣವಾಗಿ ಪರ್ಯಾಯ ಬೆಳೆಗಳನ್ನು ಬೆಳೆಯುವ ಬಗ್ಗೆ ಕೃಷಿ ಸಂಬಂಧಿತ ಇಲಾಖೆಗಳು ಗ್ರಾಮಪಂಚಾಯತಿ, ಹೋಬಳಿ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಕೃಷಿ ಅಭಿಯಾನ ಕಾರ್ಯಕ್ರಮದ ಮೂಲಕ ರೈತರಿಗೆ ಅರಿವು ಮೂಡಿಸಲಾಗುವುದು ಎಂದು ರಾಜ್ಯ ಕೃಷಿ ಸಚಿವರಾದ ಶ್ರೀ ಕೃಷ್ಣಭೈರೇಗೌಡ ಅವರು ತಿಳಿಸಿದರು.

ವಿಕಾಸ ಸೌಧದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು ಮುಂಗಾರು ಹಂಗಾಮಿಗೆ ಸುಮಾರು 10.70 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳ ಅಗತ್ಯವಿದ್ದು 11 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜಗಳನ್ನು ಶೇಖರಿಸಿಡಲಾಗಿದೆ ಎಂದರು. 21 ಲಕ್ಷ ಟನ್ ರಸಗೊಬ್ಬರಗಳ ಅಗತ್ಯ ಇದ್ದು, ಸಧ್ಯ 3.89 ಲಕ್ಷ ಟನ್ ರಸಗೊಬ್ಬರ ದಾಸ್ತಾನಿದೆ ಎಂದ ಸಚಿವರು ವಾಡಿಕೆಯಂತೆ ಮಳೆಯಾದಲ್ಲಿ ಸುಮಾರು 140 ಲಕ್ಷ ಟನ್ ಆಹಾರ ಉತ್ಪಾದನೆ ಗುರಿ ಹೊಂದಲಾಗಿದೆ ಎಂದರು.

ಮುಂಗಾರು ಹಂಗಾಮಿನಲ್ಲಿ ಈಗಾಗಲೇ ಸಾವಿರ ಕ್ವಿಂಟಾಲ್ ಬಿತ್ತನೆ ಬೀಜ ಮಾರಾಟ ಮಾಡಲಾಗಿದೆ ಎಂದ ಶ್ರೀ ಕೃಷ್ಣ ಭೈರೇಗೌಡ ಅವರು ಬಿತ್ತನೆ ಬೀಜಗಳನ್ನು ಅಕ್ರಮವಾಗಿ ಹೆಚ್ಚು ಬೆಲೆಗೆ ಮಾರಾಟ ಮಾಡುವವರ ವಿರುದ್ಧ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ ಎಂದರು.

ಕೃಷಿಭಾಗ್ಯ ಯೋಜನೆಯಡಿ ಹೆಚ್ಚು ಮಳೆ ಬಂದಾಗ ಆಹಾರವನ್ನು ಶೇಖರಿಸಿಟ್ಟುಕೊಂಡು ಅಗತ್ಯವಿದ್ದಾಗ ಬಳಸುವಂತೆ ಹಾಗೂ ಭೂಚೇತನ ಯೋಜನೆಯಡಿ ಬೆಳೆಗಳಿಗೆ ಅಗತ್ಯವಿರುವಷ್ಟು ಲಘು ಪೋಷಕಾಂಶಗಳನ್ನು ಬಳಕೆ ಮಾಡುವಂತೆ ರೈತರಲ್ಲಿ ಅರಿವು ಮುಡಿಸುವ ಕೆಲಸವನ್ನು ಇಲಾಖೆ ಈಗಾಗಲೇ ಮಾಡಿದೆ ಎಂದ ಶ್ರೀ ಕೃಷ್ಣ ಭೈರೇಗೌಡ ಅವರು ರಾಜ್ಯದಲ್ಲಿ ಈ ವರ್ಷ ವಾಡಿಕೆಯಂತೆ ಮಳೆ ಬರುವ ಸಾಧ್ಯತೆ ಇದೆ ಎಂದರು.

ಕೆಪಿಪಿ

## ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು, ಜೂನ್ 12 (ಕರ್ನಾಟಕ ವಾರ್ತೆ)

ರಾಜ್ಯದ ಮೂರು ಸಾರ್ವಜನಿಕ ಉದ್ದಿಮೆಗಳಿಗೆ ಮಾನ್ಯ ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿ ಯನ್ನು ಮುಖ್ಯಮಂತ್ರಿಯವರು ದಿನಾಂಕ: 15-6-2015 ರಂದು ತಮ್ಮ ಗೃಹ ಕಚೇರಿ 'ಕೃಷ್ಣಾ'ದಲ್ಲಿ ಪ್ರದಾನ ಮಾಡಲಿದ್ದಾರೆ.

ರಾಜ್ಯದಲ್ಲಿರುವ ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಹಾಗೂ ಉತ್ತೇಜಿಸುವ ಸಲುವಾಗಿ ಪ್ರತಿ ವರ್ಷವು ಈ ಪ್ರಶಸ್ತಿಯನ್ನು ರಾಜ್ಯ ಸರ್ಕಾರವು ನೀಡುತ್ತಾಬಂದಿದ್ದು, 2014-15 ನೇ ಸಾಲಿನಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿರುವ ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಬೆಂಗಳೂರಿನ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಹಾಗೂ ಬೆಂಗಳೂರಿನ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಈ ಮೂರು ಸಾರ್ವಜನಿಕ ಉದ್ದಿಮೆಗಳು ಮುಖ್ಯಮಂತ್ರಿಗಳ ವಾರ್ಷಿಕ ರತ್ನ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿವೆ.

ಬಾಬು/ಪೂರ್ಣಿಮ

## ಫಲಿತಾಂಶ

ಬೆಂಗಳೂರು, ಜೂನ್ 12 (ಕರ್ನಾಟಕ ವಾರ್ತೆ)

ಜನವರಿ 2015 ರ ರಾಜ್ಯದ 43 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಎಸ್.ಸಿ.ವಿ.ಟಿ. ಪರೀಕ್ಷೆಯ ಫಲಿತಾಂಶವನ್ನು ಸಂಬಂಧಪಟ್ಟ ಪರೀಕ್ಷಾ ಕೇಂದ್ರಗಳಲ್ಲಿ, ಹಾಗೂ ವಿಭಾಗೀಯ ಕಚೇರಿಗಳಲ್ಲಿ ದಿನಾಂಕ: 15-6-2015 ರಂದು ಅಪರಾಹ್ನ 4-00 ಗಂಟೆಗೆ ಪ್ರಕಟಿಸಲಾಗುವುದು. ಅಂಕಪಟ್ಟಿಯನ್ನು ಪಡೆಯಲು ದಿನಾಂಕ: 25-6-2015 ನಂತರ ಆಯಾ ಪರೀಕ್ಷಾ ಕೇಂದ್ರಗಳ ಪ್ರಾಚಾರ್ಯರನ್ನು ಸಂಪರ್ಕಿಸಬಹುದು. ದಿನಾಂಕ: 12-6-2015 ರಂದು ಬೆಳಿಗ್ಗೆ 11-00 ಗಂಟೆಯಿಂದ ಫಲಿತಾಂಶವು www.emptrg.kar.nic.in ಇಂಟರ್‌ನೆಟ್‌ನಲ್ಲೂ ಸಹ ಲಭ್ಯವಿರುತ್ತದೆ.

## ಫಲಿತಾಂಶ

ಬೆಂಗಳೂರು, ಜೂನ್ 12 (ಕರ್ನಾಟಕ ವಾರ್ತೆ)

ರಾಷ್ಟ್ರೀಯ ಶಿಶಿಕ್ಷು ತರಬೇತಿ ಯೋಜನೆಯಡಿಯಲ್ಲಿ ಏಪ್ರಿಲ್ 2015 ರಲ್ಲಿ ರಆಜ್ಯದ 17 ಪರೀಕ್ಷಾ ಕೇಂದ್ರಗಳಲ್ಲಿ ನಡೆದ ಅಖಿಲ ಭಾರತ ವೃತ್ತಿ ಪರೀಕ್ಷೆ (ಶಿಶಿಕ್ಷು) ಯ ಫಲಿತಾಂಶವನ್ನು ಸಂಬಂಧಪಟ್ಟ ಕೇಂದ್ರಗಳಲ್ಲಿ ಹಾಗೂ ವಿಭಾಗೀಯ ಕಚೇರಿಗಳಲ್ಲಿ ದಿನಾಂಕಳ 17-06-2015 ರಂದು ಅಪರಾಹ್ನ 4-00 ಗಂಟೆಗೆ ಪ್ರಕಟಿಸಲಾಗುವುದು. ಅಂಕಪಟ್ಟಿಗಳನ್ನು ಪಡೆಯಲು ದಿನಾಂಕ: 30-6-2015 ರ ನಂತರ ಆಯಾ ಪರೀಕ್ಷಾ ಕೇಂದ್ರಗಳ ಪ್ರಾಚಾರ್ಯರನ್ನು ಸಂಪರ್ಕಿಸಬಹುದು. ದಿನಾಂಕ: 16-6-2015 ರಂದು ಬೆಳಿಗ್ಗೆ 11-00 ಗಂಟೆಗೆ ಫಲಿತಾಂಶವು www.emptrg.kar.nic.in ಇಂಟರ್‌ನೆಟ್‌ನಲ್ಲೂ ಸಹ ಲಭ್ಯವಿರುತ್ತದೆ.